ಓ.ಎಸ್.ನಂ.**559/2022**
ಡಿಡಬ್ಲ್ಯೂ .

ಪ್ರಮಾಣ ವಚನ ಬೋಧಿಸಿದ ದಿನಾಂಕಃ **10.09.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ ಆರ್.ಎಂ.ಕೆ. ವಕೀಲರಿಂದ**

ನಂಜಮ್ಮನವರು ಅಸಲುದಾವೆ ಸಂಖ್ಯೆಃ**130/2009** ರಲ್ಲಿ ದಾವೆ ಹಾಗೂ ಆರ್.ಎಂ.ನಂ.**10006/2015** ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನೆನಪಿಲ್ಲ. ಸದರಿ ಎರಡು ಕೇಸ್‌ಗಳಲ್ಲಿ ನಾನು ವಕೀಲರನ್ನು ನೇಮಿಸಿಕೊಂಡು ಪ್ರಕರಣ ನಡೆಸಿದ್ದೆನು ಎಂದರೆ ನೆನಪಿಲ್ಲ. ಈ ಕೇಸಿನಲ್ಲಿ ಒಟ್ಟು ಮೂರು ಆಸ್ತಿಗಳಿವೆ. ಸದರಿ ಮೂರು ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ನಿಮಗೆ ಹಕ್ಕು ಇಲ್ಲವಾ? ಎಂದರೆ ಇಲ್ಲ. ಐಟಂ ನಂ.**3** ರಲ್ಲಿ ನೀವು ಮನೆ ಕಟ್ಟಿದ್ದೀರಿ ಎಂದು ತಿಳಿಸಿದ್ದು**,** ಈ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಸದರಿ ಮನೆಯನ್ನು ನಾನು **1992–93** ರಲ್ಲಿ ಕಟ್ಟಿದ್ದೇನೆ. ಅದಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆದಿದ್ದೀರಾ ಎಂದರೆ ಹೌದು. ಸದರಿ ವಿದ್ಯುತ್ ಸಂಪರ್ಕವು ನನ್ನ ಅಣ್ಣನಾದ ಗೋವಿಂದರಾಜ್ ರವರ ಹೆಸರಿನಲ್ಲಿ ಇದೆ. ಅದನ್ನು ಪಡೆಯಲು ಗೋವಿಂದರಾಜುರವರೇ ಅರ್ಜಿ ಕೊಟ್ಟಿದ್ದರು. ಐಟಂ ನಂ.**3** ರ ಆಸ್ತಿಯನ್ನು ಒಟ್ಟು ಕುಟುಂಬದ ಪರವಾಗಿ ಗೋವಿಂದರಾಜು ರವರು ಖರೀದಿಸಿದ್ದರು. ಈ ರೀತಿ ಕ್ರಯಪತ್ರದಲ್ಲಿ ನಮೂದಾಗಿದೆಯಾ ಎಂದರೆ ಇಲ್ಲ. ಸದರಿ ಕ್ರಯಪತ್ರದಲ್ಲಿ ನೀವು ಭಾಗವಹಿಸಿದ್ದೀರಾ ಎಂದರೆ ನೆನಪಿಲ್ಲ. ಕ್ರಯಪತ್ರವಾದ ವರ್ಷವೇ ಆ ಜಮೀನಿನ ಖಾತೆ ಬದಲಾವಣೆಯಾಗಿರುತ್ತದೆ. ಆ ಸಮಯದಲ್ಲಿ ಒಟ್ಟು ಕುಟುಂಬದ ಆದಾಯ ಎಷ್ಟಿತ್ತು ಎಂದರೆ ಸಾಕ್ಷಿಯು ವರ್ಷಕ್ಕೆ **25** ಸಾವಿರ ಆದಾಯ ಇತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ಅವರೇ ಮನೆಯಲ್ಲಿ

ಹಿರಿಯರಾಗಿದ್ದರು ಎಂದರೆ ಸರಿ. ನನ್ನ ತಂದೆಯು ವಿದ್ಯಾವಂತರಾಗಿದ್ದರು ಹಾಗೂ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ.

ನನ್ನ ತಂದೆಯು **1992** ರಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು **1983** ರಲ್ಲಿ ಸಾಲ ಪಡೆದುಕೊಂಡಿದ್ದೇನೆ ಎಂದು ತಿಳಿಸಿದ್ದು, ಸದರಿ ಸಾಲವನ್ನು ಯಾವ ವರ್ಷ ತೀರಿಸಿದ್ದೇನೆ ಎಂದರೆ ನೆನಪಿಲ್ಲ. ನಾನೇ ನನ್ನ ಹೆಸರಿನಲ್ಲಿ ಸಾಲ ತೀರಿಸಿ ರಶೀದಿ ಪಡೆದಿದ್ದೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು **1983** ರಲ್ಲಿ **3**ನೇ ಬಾರಿಗೆ ಸಾಲ ಪಡೆದಿದ್ದೇನೆ, ಅದಕ್ಕೆ ಸಂಬಂಧಿಸಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಮೂರನೇ ಬಾರಿಗೆ ಪಡೆದ ಸಾಲವನ್ನು ಒಟ್ಟು ಕುಟುಂಬದ ಪರವಾಗಿ ಪಡೆದಿದ್ದೇನೆ. **1983** ರಲ್ಲಿ ಪಡೆದ ಎರಡೂ ಸಾಲವನ್ನು ಗೋವಿಂದರಾಜುರವರೇ ತೀರಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ **3**ನೇ ಬಾರಿಗೆ ಗೋವಿಂದರಾಜು ರವರು ಒಬ್ಬರೇ ಸಾಲ ಪಡೆದು ತೀರಿಸಿದ್ದಾರೆ ಎಂದರೆ ಸರಿಯಲ್ಲ. **2009** ರ ವರೆಗೂ ಎಲ್ಲಿಯೂ ಕೂಡ ನಾನು ಐಟಂ ನಂ.**3** ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು ಪ್ರಶ್ನೆ ಮಾಡಿಲ್ಲ ಎಂದರೆ ನೆನಪಿಲ್ಲ. **1981** ರಿಂದ ಇಲ್ಲಿಯ ತನಕ ಸದರಿ ಆಸ್ತಿಯ ಖಾತೆಯು ಗೋವಿಂದರಾಜುರವರ ಹೆಸರಿನಲ್ಲಿಯೇ ಇದೆ ಎಂದರೆ ಸರಿಯಲ್ಲ.

ನಂಜಮ್ಮನವರು ಹಾಕಿದ ದಾವೆ ಮತ್ತು ಮೇಲ್ಮನವಿ ವಜಾ ಆದ ನಂತರ **2**ನೇ ಪ್ರತಿವಾದಿ–ವರಲಕ್ಷ್ಮೀ ರವರು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿಗೆ ತಕರಾರು ಸಲ್ಲಿಸಿದ್ದೀರಾ ಎಂದರೆ ನೆನಪಿಲ್ಲ. ಸದರಿ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನೆನಪಿಲ್ಲ. **2**ನೇ ಪ್ರತಿವಾದಿಯು ಬೆಂಗಳೂರಿನ ಸಂಜಯ್ ನಗರದಲ್ಲಿ ವಾಸ ಮಾಡುತ್ತಿದ್ದಾರೆ. **1**ನೇ ಪ್ರತಿವಾದಿಯು ಕೂಡ ಬೆಂಗಳೂರಿನಲ್ಲೇ ವಾಸ ಮಾಡುತ್ತಿದ್ದಾರೆ, ಆದರೆ ಅವರ ವಿಳಾಸ ಗೊತ್ತಿಲ್ಲ. **4**ನೇ ವಾದಿಯಾದ ಅಶ್ವಿನ್ ರವರು ಬೆಂಗಳೂರಿನಲ್ಲಿ ನೌಕರಿ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಅವರ ವಿದ್ಯಾಭ್ಯಾಸವೆಲ್ಲಾ

ಬೆಂಗಳೂರಿನಲ್ಲಿ ಮಾಡಿರುತ್ತಾರೆ. ಅವರು ವಿಧ್ಯಾಭ್ಯಾಸದ ಸಮಯದಿಂದ ಇಲ್ಲಿಯ ತನಕ ಬೆಂಗಳೂರಿನಲ್ಲಿಯೇ ಇದ್ದಾರೆ ಎಂದರೆ ಸರಿಯಲ್ಲ. ಆದರೆ ವಿಧ್ಯಾಭ್ಯಾಸ ಮುಗಿಸಿ ಸ್ವಲ್ಪ ವರ್ಷ ಇಲ್ಲಿ ಇದ್ದು ನಂತರ ಬೆಂಗಳೂರಿಗೆ ಹೋಗಿದ್ದಾರೆ. ಐಟಂ ನಂ.3 ಗೋವಿಂದರಾಜು ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಅವರ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ಇಲ್ಲಿಯವರೆಗೂ ಯಾರ ಹೆಸರಿನಲ್ಲಿಯೂ ಕೂಡ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿಯಲ್ಲ. ಐಟಂ ನಂ.3 ನ್ನು ಹೊರತುಪಡಿಸಿ ಉಳಿದ ಕುಟುಂಬದ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಎಂದರೆ ಗೊತ್ತಿಲ್ಲ. ಐಟಂ ನಂ.3 ರ ಖಾತೆಯನ್ನು ಹೊರತುಪಡಿಸಿ ಉಳಿದ ಆಸ್ತಿಗಳ ಖಾತೆಯು ಉಳಿದ ಸಹೋದರರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿಯು ಎರಡು ಐಟಂ ಗಳು ಈ ರೀತಿ ಸಹೋದರರ ಹೆಸರಿನಲ್ಲಿ ಇವೆ ಎಂದು ಹೇಳುತ್ತಾರೆ. ಸದರಿ ಎರಡು ಐಟಂ ಗಳ ಖಾತೆಯು ಪೌತಿ ವಾರಸ ಆಧಾರದ ಮೇಲೆ ಆಗಿರುತ್ತದೆ. ಯಾವ ವರ್ಷ ಖಾತೆ ಬದಲಾವಣೆಯಾಗಿದೆ ಎಂದರೆ ನೆನಪಿಲ್ಲ. 2006-07ನೇ ಸಾಲಿನಲ್ಲಿ ಸದರಿ ಖಾತೆ ಬದಲಾವಣೆಯಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಐಟಂ ನಂ.3 ರ ಖಾತೆ ಬದಲಾವಣೆಗೆ ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.